CW : 6
PW : 4

# ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪುತ್ತೂರು, ದ.ಕ

## CC No.475/2024

| | | |
|---|---|---|
| ಸಾಕ್ಷಿದಾರರ ಹೆಸರು | : | ಜಗದೀಶ್ |
| ತಂದೆಯ ಹೆಸರು | : | ಪದ್ಮಪ್ಪ ಗೌಡ |
| ಪ್ರಾಯ | : | 41 |
| ಉದ್ಯೋಗ | : | ಪರ್ನಿಚರ್ ಅಂಗಡಿ |
| ವಾಸಸ್ಥಳ | : | ಬೀರಿಗೆ |
| ದಿನಾಂಕಃ 12.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು. | | |

**ಮುಖ್ಯವಿಚಾರಣೆಃ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರಿಂದಃ**

ನನ್ನ ಸಮಕ್ಷಮ ಯಾವುದೇ ಮಹಜರು ಕ್ರಮ ಜರುಗಿಸಿರುವುದಿಲ್ಲ ಮತ್ತು ಆರೋಪಿಯಿಂದ ಯಾವುದೇ ಸೊತ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ. ಆರೋಪಿ ಗೊತ್ತು. ಈ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಮಹಜರನ್ನು ಈಗಾಗಲೇ ನಿಪಿ1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ1(ಡಿ)** ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿಸವಾಲಿಗೆ ಅನುಮತಿಯನ್ನು ಸರ್ಕಾರಿ ಸಹಾಯಕ ಅಭಿಯೋಜಕರವರು ಕೋರಿಕೊಂಡಿದ್ದು, ಅನುಮತಿ ನೀಡಿಲಾಯಿತು)**

CW : 6
PW : 4

**ಪಾಟಿಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ದಿನಾಂಕಃ23.03.2024 ರಂದು ನಾನು, ಚಾಸಾ7 ಕೊಡಿಂಬಾಡಿ ಬಳಿ ನಿಂತಿರುವಾಗ ಪುತ್ತೂರು ನಗರ ಠಾಣೆಯ ಚಾಸಾ-3 ರವರು ನಮ್ಮ ಬಳಿ ಬಂದು ಚಾಸಾ1 ಮತ್ತು ಸಿಬ್ಬಂದಿಗಳು ಇಲಾಖಾ ಜೀಪಿನಲ್ಲಿ ರೌಂಡ್ಸ್ ಕರ್ತವ್ಯದಲ್ಲಿರುವಾಗ ಸಂಜೆಃ4.30 ಕ್ಕೆ ಕೊಂಡಿಂಬಾಡಿ ಗ್ರಾಮದ ಅರ್ಬಿ ಎಂಬಲ್ಲಿ ಸಾರ್ವಜನಿಕ ಬಸ್ ನಿಲ್ದಾಣದಲ್ಲಿ ಯಾವುದೇ ಪರವಾನಗಿ ಇಲ್ಲದೇ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬುದಾಗಿ ಬಂದ ಮಾಹಿತಿಯಂತೆ ಚಾಸಾ1 ರವರು ಅವರ ಸಿಬ್ಬಂದಿಗಳೊಂದಿಗೆ ತಕ್ಷೀರು ಸ್ಥಳಕ್ಕೆ ತಲುಪಿದ್ದು, ಸದರಿ ಮಾಹಿತಿ ಬಂದ ಸ್ಥಳಕ್ಕೆ ದಾಳಿ ಮಾಡುವ ಸಮಯ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡಾಗ ನಾವು ಒಪ್ಪಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದರಂತೆ ಸದರಿ ಸ್ಥಳದಲ್ಲಿ ಶೋಧನೆ ಮಾಡಲು ಶೋಧನಾ ವಾರೆಂಟು ತಯಾರಿಸಿ ಮಾಹಿತಿ ಬಂದ ಸ್ಥಳಕ್ಕೆ ದಾಳಿ ಮಾಡಿದಾಗ ಆರೋಪಿ ಕೈಯಲ್ಲಿ ಚೀಲ ಹಿಡಿದು ಬಸ್ ನಿಲ್ದಾಣದಲ್ಲಿ ಕುಳಿತಿದ್ದು, ಆರೋಪಿಯು ಸಮವಸ್ತ್ರದಲ್ಲಿದ್ದ ಪೋಲೀಸರನ್ನು ಕಂಡು ಓಡಲು ಪ್ರಯತ್ನಿಸಿದಾಗ ಚಾಸಾ1 ರವರು ಸಿಬ್ಬಂದಿಗಳ ಸಹಾಯದಿಂದ ಆ ವ್ಯಕ್ತಿಯನ್ನು ಹಿಡಿದು ವಿಚಾರಿಸಿದಾಗ ಕೈಯಲ್ಲಿದ್ದ ಚೀಲದ ಬಗ್ಗೆ ವಿಚಾರಿಸಿದಾಗ ಅದರಲ್ಲಿ ಮಧ್ಯ ಇದ್ದು, ಅವುಗಳನ್ನು ವೈನ್ ಶಾಪ್ ನಿಂದ ಖರೀದಿಸಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ ಎಂದರೆ ಸರಿಯಲ್ಲ. ನಂತರ ನಮ್ಮ ಸಮಕ್ಷಮ ಮಹಜರು ಮುಖೇನ ಆತನ ಅಂಗಶೋಧನೆ ಮಾಡಿದಾಗ ಪ್ಯಾಂಟಿನ ಬಲಕಿಸೆಯಲ್ಲಿದ್ದ 570 ರೂ. ನಗದನ್ನು ಹಾಜರುಪಡಿಸಿದ್ದು, ತಾನು ಮಧ್ಯ ಮಾರಾಟ ಮಾಡಿ ಬಂದ ಹಣ ಎಂದು ತಿಳಿಸಿರುತ್ತಾನೆ ಎಂದರೆ ಸರಿಯಲ್ಲ.

ಆತನಿಂದ ಪರವಾಗಿ ಇಲ್ಲದೇ ಅಕ್ರಮ ಮಧ್ಯ ತುಂಬಿದ 180 ML ನ ಮೈಸೂರು ಲ್ಯಾನ್ಸರ್ ವಿಸ್ಕಿ ಎಂದು ಬರೆದಿರುವ 6 ಟೆಟ್ರಾ ಪ್ಯಾಕೇಟ್, 180 ML ನ ಬ್ಯಾಗ್ ಪೈಪರ್ ವಿಸ್ಕಿ ಎಂದು ಬರೆದಿರುವ 3 ಟೆಟ್ರಾ ಪ್ಯಾಕೇಟ್, 180 ML ನ ಮೆಕಡಾವೆಲ್ಸ್ ಎಂದು ಬರೆದಿರುವ 2 ಟೆಟ್ರಾ ಪ್ಯಾಕೇಟ್, 180 ML ನ ಪ್ರೆಸ್ಟಿಜ್ ವಿಸ್ಕಿ

CW : 6
PW : 4

ಎಂದು ಬರೆದಿರುವ 4 **ಟೆಟ್ರಾ ಪ್ಯಾಕೇಟ್**, ಪಂಚರಾದ ನಮ್ಮ ಸಮಕ್ಷಮ ಮಹಜರು ಮುಖೇನ ಸ್ವಾಧೀನಪಡಿಸಿಕೊಂಡಿದ್ದು, ನಾನು ಸ್ಥಳದಲ್ಲಿಯೇ ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿಃ23.03.2024 ರಂದು ತನಿಖಾಧಿಕಾರಿಯವರ ನನ್ನ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು **ನಿಪಿ4** ಎಂದು ಗುರುತಿಸಲಾಯಿತು. ಆರೋಪಿಯ ಪರಿಚಯವಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿರುತ್ತೇನೆ ಎಂದರೆ ಸರಿಯಲ್ಲ.

**ಪಾಟಿಸವಾಲು ಆರೋಪಿಗಳ ಪರ ವಕೀಲರಿಂದಃ ಇರುವುದಿಲ್ಲ.**

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು